ಕಥಾಪ್ರಭ

ಸ್ಫೂರ್ತಿಕಥಾ ಮಂಜರಿ

(ಸತ್ಯಘಟನೆಗಳು ಕೆಲವೊಮ್ಮೆ ಕಾಲ್ಪನಿಕ ಕತೆಗಳಿಗಿಂತಲೂ ರೋಚಕವಾಗಿರುತ್ತವೆ. ಅಂತಹ ಕೆಲವು ಸ್ಫೂರ್ತಿದಾಯಕ ಪ್ರಸಂಗಗಳೇ ಈ ತಿಂಗಳ ಕಥಾಪ್ರಭ ಅಂಕಣದ ಹೂರಣವಾಗಿದೆ.)

ವರದಿಗಾರನ ಕರ್ತವ್ಯಪರತೆ

ಸಾಹಸ ಎನ್ನುವುದು ಯುದ್ಧಭೂಮಿಗಷ್ಟೇ ಸೀಮಿತವಾಗಿಲ್ಲ. ಅದನ್ನು, ಎಲ್ಲಿ ಒಬ್ಬ ವ್ಯಕ್ತಿಯು ಪ್ರಾಣವನ್ನು ತೆತ್ತಾದರೂ ತನ್ನ ಕರ್ತವ್ಯವನ್ನು ನಿರ್ವಹಿಸುವನೋ, ಅಲ್ಲೆಲ್ಲ ಕಾಣಬಹುದು.

ಮ್ಯಾಥ್ಯೂ ಡ್ಯಾನ್‌ಜ್ಲರ್ ಒಬ್ಬ ಯುದ್ಧಭೂಮಿಯ ವರದಿಗಾರ. ಅವನು ಫ್ರಾನ್ಸಿನ ಒಂದು ಖ್ಯಾತ ವೃತ್ತಪತ್ರಿಕೆಯ ಮುಖ್ಯ ವರದಿಗಾರನೂ ಹೌದು. ಅವನು ಒಮ್ಮೆ ಪೋಲಿಸರು ಮತ್ತು ಬಂಡುಕೋರರ ನಡುವಣ ದಿನನಿತ್ಯದ ಘರ್ಷಣೆಗಳನ್ನು ವರದಿ ಮಾಡುತ್ತಿದ್ದ. ಆ ಘರ್ಷಣೆಗಳು ಅಸಹ್ಯಕರವಾದ ರೀತಿಯಲ್ಲಿ, ದಿನದಿನಕ್ಕೆ ಜಾಸ್ತಿಯಾಗುತ್ತಲೇ ಇದ್ದವು.

ಒಂದು ದಿನ ಅವನು ಘರ್ಷಣೆಯ ಸ್ಥಳಕ್ಕೆ ಹೋಗಿದ್ದ. ಅಲ್ಲಿ ಬಂಡುಕೋರರು ಮತ್ತು ಪೋಲಿಸರು ಪರಸ್ಪರ ಹಣಾಹಣಿ ನಡೆಸುತ್ತಿದ್ದರು. ಬಂಡುಕೋರರು ದೊಡ್ಡ ದೊಡ್ಡ ಕವಣೆ ಕಲ್ಲುಗಳನ್ನೇ ಪೋಲಿಸ ರತ್ತ ಎಸೆಯುತ್ತಿದ್ದರು; ಪೋಲಿಸ್ ದಳವು ಗುಂಡುಗಳಿಂದ ಅವುಗಳನ್ನು ಎದುರಿಸುತ್ತಿತ್ತು. ಮ್ಯಾಥ್ಯೂ ಸುರಕ್ಷಿತವೆಂದು ಹೇಳಬಹುದಾದ ಒಂದು ಸ್ಥಳದಲ್ಲಿ ನಿಂತು ಟಿಪ್ಪಣಿ ಮಾಡಿಕೊಳ್ಳುತ್ತಿದ್ದ.

ಆಗ ಎಲ್ಲಿಂದಲೋ ದೊಡ್ಡ ಕಲ್ಲೊಂದು ಬಂದು ಅವನ ಹಣೆಗೆ ಬಡಿಯಿತು. ಅವನಿಗೆ ಬವಳಿ ಬಂದಿತು. ಅವನು ಕಲ್ಲುಮುಳ್ಳು ಗಳಿದ್ದ ಭೂಮಿಯ ಮೇಲೆ ಹಾಗೆಯೇ ಉರುಳಿಬಿದ್ದನು. ಗಾಯದಿಂದ ರಕ್ತ ಚಿಮ್ಮುತ್ತಿತ್ತು. ಈ ಆಘಾತದಿಂದ ಅವನು ಸಾವರಿಸಿಕೊಳ್ಳುವಷ್ಟರಲ್ಲಿ, ಒಂದು ಗುಂಡು ಬಂದು ಅವನ ಎದೆಗೆ ತಾಕಿತು.

ಸೈನ್ಯದ ಒಬ್ಬ ವೈದ್ಯನು ಅದನ್ನು ಕಂಡು ಓಡಿಬಂದನು. ಮ್ಯಾಥ್ಯೂ ತನ್ನ ಟಿಪ್ಪಣಿ ಪುಸ್ತಕವನ್ನು ಅವನ ಕೈಯಲ್ಲಿ ತುರುಕಿ, ಏದುಸಿರು ಬಿಡುತ್ತಾ ಹೇಳಿದನು:

"ಇಲ್ಲಿ ನಾನು ಹೇಳುವುದು ಕೇಳಿ, ಡಾಕ್ಟರ್, ನನ್ನ ವರದಿ ಇನ್ನೂ ಪೂರ್ಣವಾಗಿಲ್ಲ..."

"ಆದರೆ, ನಾನು ನಿನ್ನನ್ನು ಆಸ್ಪತ್ರೆಗೆ ಕರೆದೊಯ್ಯುತ್ತೇನೆ."

"ಇಲ್ಲ, ಇಲ್ಲ. ನನಗಿರುವುದು ಸ್ವಲ್ಪ ಸಮಯ ಮಾತ್ರ. ದಯವಿಟ್ಟು ಬರೆದುಕೊಳ್ಳಿ."

ಓಗೆ ಹೇಳಿ, ಅಗಾಧ ನೋವಿನ ನಡುವೆಯೂ ಮ್ಯಾಥ್ಯೂ ವೈದ್ಯರಿಗೆ ಹೇಳಿ ಬರೆಯಿಸಲು ಪ್ರಯತ್ನಿಸಿದ:

"ಬರೆಯಿರಿ.....ಮೂರು ಜನರಿಗೆ ಗಾಯವಾಗಿದೆ.... ಅವರನ್ನು ಕಲ್ಲುಗಳು ಮತ್ತು ಗುಂಡುಗಳು ಬಡಿದಿವೆ! ಅದರಲ್ಲಿ ಒಬ್ಬನಿಗೆ ಸಾವುಂಟಾಯಿತು.....ಅದಾಗಿದ್ದು ಗುಂಡೇಟಿನಿಂದ!"

"ಸತ್ತಿದ್ದು ಯಾರು?" ಎಂದು ಕೇಳಿದ ವೈದ್ಯ.

" ಬರೆದುಕೊಳ್ಳಿ, ಮ್ಯಾಥ್ಯೂ...ಡ.... ಡ್ಯಾನ್‌ಜ್ಲರ್"

ಮರುಕ್ಷಣದಲ್ಲಿಯೇ ಅವನು ಸತ್ತುಹೋದನು.

ಹತ್ತುಸಾವಿರ ರೂಪಾಯಿಗಳ ದಾನ

ದಾನ ಮಾಡುವುದು ವ್ಯಕ್ತಿಯೊಬ್ಬನಲ್ಲಿರಬೇಕಾದ ದೊಡ್ಡ ಗುಣ. ಆದರೆ, ಯಾವುದೇ ಹೆಸರು, ಕೀರ್ತಿಯ ಬಯಕೆ ಇಲ್ಲದೆ, ನಿಸ್ವಾರ್ಥಭಾವದಿಂದ ದಾನಮಾಡುವುದು ಅದಕ್ಕಿಂತಲೂ ಶ್ರೇಷ್ಠವಾದ ಗುಣ.

ಭಾರತದ ವಿಭಜನೆಗೆ ಮುಂಚೆ ಜೆಮ್‌ಷಡ್‌ಜಿ ಮೆಹತಾ ಕರಾಚಿ ನಗರದ ಮೇಯರ್ ಆಗಿದ್ದರು. ಕೆಲವು ಸಮಾಜ ಸೇವಕರು ಅಲ್ಲಿದ್ದ ದೊಡ್ಡದೊಂದು ಆಸ್ಪತ್ರೆಗೆ ದೇಣಿಗೆ ಕೊಡಬೇಕೆಂದು ಕೇಳಿಕೊಂಡರು. ಮೆಹತಾ ಅವರು ಒಂದು ಚೆಕ್ ಬರೆದುಕೊಟ್ಟರು. ಅದನ್ನು ನೋಡಿದ ಕಾರ್ಯಕರ್ತರಿಗೆ ಅಚ್ಚರಿಯಾಯಿತು. ಏಕೆಂದರೆ ಚೆಕ್‌ನ ಮೊತ್ತ ರೂ. ೯,೯೯೫ ಆಗಿತ್ತು.

ಕಾರ್ಯಕರ್ತರು ಮೆಹತಾ ಅವರಿಗೆ ಕೇಳಿಕೊಂಡರು: "ಸ್ವಾಮಿ, ದಯವಿಟ್ಟು ಇನ್ನು ಐದು ರೂಪಾಯಿಗಳನ್ನು ದಾನ ಮಾಡಿ. ನಿಮ್ಮ ಹೆಸರನ್ನು ಅಮೃತಶಿಲೆಯ ಫಲಕದ ಮೇಲೆ ಬರೆಸುತ್ತೇವೆ."

"ಹೌದೇನು?"

"ಹೌದು, ಸ್ವಾಮಿ"

"ಅದೇ ನನಗೆ ಬೇಡವಾಗಿದ್ದು", ಜೆಮ್‌ಷೆಡ್‌ಜಿ ಮೆಹತಾ ನಿಶ್ಚಯಪೂರ್ವಕವಾಗಿ ಹೇಳಿದರು, "ಈ ದೇಣಿಗೆಯ ಬಗ್ಗೆ ಯಾರಿಗೂ ತಿಳಿಯಬಾರದು ಎನ್ನುವುದೇ ನನ್ನ ಇಚ್ಛೆ."

ಲಿಂಕನನ ಕೃತಜ್ಞತೆ

ದೊಡ್ಡ ಮನುಷ್ಯರು ತಮಗೆ ಉಪಕಾರ ಮಾಡಿದವರನ್ನು ಎಂದಿಗೂ ಮರೆಯುವುದಿಲ್ಲ. ಈ ಗುಣ ಅವರಿಗೆ ಸಹಜವಾಗಿಯೇ ಬಂದಿರುತ್ತದೆ.

ಅಬ್ರಹಾಂ ಲಿಂಕನ್ ಅಮೆರಿಕದ ಅಧ್ಯಕ್ಷ ಪದವಿಯ ಚುನಾವಣೆಗೆ ನಿಂತಿದ್ದನು. ಪ್ರಚಾರ ಕಾರ್ಯದಲ್ಲಿ ಬಹಳ ವ್ಯಸ್ತನಾಗಿದ್ದನು. ಒಮ್ಮೆ ಒಂದು ಬಹಳ ಮುಖ್ಯವಾದ ಪ್ರಚಾರ ಸಭೆಗೆ ಹೋಗಲು ಸಿದ್ಧತೆ ಮಾಡಿಕೊಳ್ಳುತ್ತಿದ್ದನು. ಆಗ ಅವನಿಗೆ ಯಾರೋ ಒಂದು ತುರ್ತಾದ ಪತ್ರವನ್ನು ತಂದುಕೊಟ್ಟರು.

ಆ ಪತ್ರ ಒಬ್ಬ ಮಹಿಳೆಯದು. ಅವಳು ಹಿಂದೊಮ್ಮೆ ಅವನಿಗೆ ಆಶ್ರಯ ನೀಡಿದ್ದಳು. ಆಗ ಲಿಂಕನ್ ಕಾನೂನು ತರಗತಿ ಓದುತ್ತಿದ್ದ. ಆ ಸಮಯದಲ್ಲಿ ಕಡುಬಡತನದಲ್ಲಿದ್ದ ಅವನ ಬಟ್ಟೆಗಳೆಲ್ಲ ಹರಿದು ಚಿಂದಿಯಾಗಿದ್ದವು. ಬೆಳಗ್ಗೆ ಆ ಮಹಿಳೆಗಾಗಿ ಕಾಡಿಗೆ ಹೋಗಿ ಉರುವಲು ಕಟ್ಟಿಗೆ ತಂದುಕೊಡುತ್ತಿದ್ದ. ರಾತ್ರೆ ಕಾನೂನು ಪುಸ್ತಕಗಳನ್ನು ಓದಿ, ಪರೀಕ್ಷೆಗೆ ಸಿದ್ಧಮಾಡಿಕೊಳ್ಳುತ್ತಿದ್ದ.

ಆನಂತರ ಅವನು ಬಹಳ ಪ್ರಸಿದ್ಧ ವಕೀಲನಾದ. ಅದಕ್ಕೆಂದೇ ಈಗ ಆ ವೃದ್ಧ ಮಹಿಳೆ ಕಾಗದದಲ್ಲಿ ಏನಂತಿ ಮಾಡಿಕೊಂಡಿದ್ದಳು. ಅವಳ ಮಗ ಒಂದು ಕೊಲೆ ಮೊಕದ್ದಮೆಯಲ್ಲಿ ಸಿಕ್ಕಿಹಾಕಿಕೊಂಡಿದ್ದ. ಕೊಲೆಯಾದವನು ಸಮಾಜಕಂಟಕ, ಕುಡುಕ ಮತ್ತು ಅಪರಾಧಿ ಮನೋಭಾವದವನು.

ಲಿಂಕನನ ಸ್ನೇಹಿತರೆಲ್ಲ ಚುನಾವಣಾ ಪ್ರಚಾರ ಬಿಟ್ಟು ಹೋಗಬಾರದೆಂದು ಒತ್ತಾಯ ಮಾಡಿದರು. ಆದರೂ ಲಿಂಕನ್ ಎಲ್ಲವನ್ನೂ ಬಿಟ್ಟು ಆ ವೃದ್ಧ ಮಹಿಳೆಯ ಸಹಾಯಕ್ಕಾಗಿ ಧಾವಿಸಿದ. ಆ ಮೂಲಕ ತನ್ನ ಚುನಾವಣಾ ಪ್ರಚಾರವನ್ನು ಗಾಳಿಗೆ ತೂರಿಬಿಟ್ಟ!

ನಿಜವಾದ ಹಿತೈಷಿಗಳು

ಪ್ರತಿಯೊಂದು ಕಾರ್ಯಕ್ಕೂ ಎರಡು ಮುಖಗಳಿವೆ. ಒಂದು ಒಳ್ಳೆಯ ಮುಖ. ಇನ್ನೊಂದು ಕೆಟ್ಟ ಮುಖ. ನಾವು ಕೇವಲ ಒಳ್ಳೆಯ ಮುಖವನ್ನು ಮಾತ್ರ ನೋಡಲು ಕಲಿಯಬೇಕು. ಇದರಿಂದ ನಮ್ಮಲ್ಲಿ ಸಹನಶೀಲತೆ ಬೆಳೆಯುತ್ತದೆ.

ಸ್ವಾಮಿ ದಯಾನಂದ ಸರಸ್ವತಿಯವರು ಆರ್ಯ ಸಮಾಜದ ಸ್ಥಾಪಕರು. ಅವರು ಒಂದು ದೊಡ್ಡ ಗುಂಪಿನ ಮುಂದೆ ಭಾಷಣ ಮಾಡುತ್ತಿದ್ದರು. ಆ ಗುಂಪಿನಲ್ಲಿ ಕೆಲವರು ಸಮಾಜಘಾತುಕರೂ ಇದ್ದರು. ಅವರು ಸ್ವಾಮೀಜಿಯವರನ್ನು ಹೀಯಾಳಿಸಿದರು. ಆದರೆ ಅವರು ಶಾಂತವಾಗಿಯೇ ತಮ್ಮ ಭಾಷಣವನ್ನು ಮುಂದುವರಿಸಿದರು.

ಆ ಗೂಂಡಾಗಳು ಅಲ್ಲಿಗೇ ಬಿಡಲಿಲ್ಲ. ಸಭೆಯನ್ನು ಹಾಳು ಮಾಡಲು ಬಹಳ ಪ್ರಯತ್ನಿಸಿದರು. ಕಡೆಗೆ, ದಯಾನಂದರತ್ತ ಕಲ್ಲು ಮಣ್ಣುಗಳನ್ನು ಎಸೆಯಲು ಆರಂಭಿಸಿದರು. ಆದರೆ ಸ್ವಾಮೀಜಿ ಶಾಂತವಾಗಿಯೇ ಇದ್ದು, ತಮ್ಮ ಅನುಯಾಯಿಗಳಾರೂ ಯಾವ ಪ್ರತೀಕಾರವನ್ನೂ ಮಾಡದಂತೆ ನೋಡಿಕೊಂಡರು. ಅವರೆಲ್ಲರೂ ಸುಮ್ಮನೆ ಕುಳಿತು ನೋಡುತ್ತಿದ್ದರು.

ಮಣ್ಣಿನ ಧೂಳಿಯು ಆಕಾಶವನ್ನು ಕವಿದುಕೊಂಡಿತು. ಸ್ವಾಮೀಜಿಯವರ ಭಾಷಣ ಅದರ ನಡುವೆಯೇ ಮುಂದುವರಿಯಿತು. ಭಾಷಣ ಮುಗಿದಾಗ, ಸ್ವಾಮೀಜಿಯವರ ಅನುಯಾಯಿಗಳು, ಗೂಂಡಾಗಳಿಗೆ ತಕ್ಕ ಶಾಸ್ತಿ ಮಾಡಲು ತಮಗೆ ಏಕೆ ಅವಕಾಶ ನೀಡಲಿಲ್ಲವೆಂದು ಅವರನ್ನು ಕೇಳಿದರು. ಆಗ ಸ್ವಾಮಿ ದಯಾನಂದರು ನಸುನಗುತ್ತ ಹೀಗೆ ಹೇಳಿದರು:

"ನಾವು ಏಕೆ ತಾನೇ ಪ್ರತೀಕಾರ ಮಾಡಲು ಹೋಗಬೇಕು? ಅವರು ನಮ್ಮ ಆಂದೋಲನಕ್ಕೆ ಉಪಕಾರವನ್ನೇ ಮಾಡುತ್ತಿದ್ದರು. ನಮ್ಮ ಆರ್ಯಸಮಾಜದ ತೋಟಕ್ಕೆ ಅವರು ಫಲವತ್ತಾದ ಮಣ್ಣನ್ನು ಒದಗಿಸುತ್ತಿದ್ದರು. ಇದರಿಂದ ತೋಟವನ್ನು ಚೆನ್ನಾಗಿ ಬೆಳೆಸಬಹುದಲ್ಲವೆ? ಅವರು ಅದಕ್ಕೆ ಬೇಕಾದ ಗೊಬ್ಬರವನ್ನು ಸರಬರಾಜು ಮಾಡುತ್ತಿದ್ದರು. ಅವರಿಗೆ ನಾವು ಧನ್ಯವಾದ ಸಲ್ಲಿಸಲೇಬೇಕು. ಏಕೆಂದರೆ ಅವರೇ ನಮ್ಮ ನಿಜವಾದ ಹಿತೈಷಿಗಳು."

ಸ್ನೇಹಪ್ರಭ

ಅನಾವಶ್ಯಕ ಭೀತಿಯಿಂದ ಪಾರಾಗುವುದು ಹೇಗೆ?

ಜೀವನದಲ್ಲಿ ಒಂದು ನಿರ್ದಿಷ್ಟತೆ ಇರಬೇಕು. ತಾನು ಏನು, ತಾನೇನು ಮಾಡಬೇಕೆಂದಿರುವೆ ಎಂಬುದರ ಬಗ್ಗೆ ಸ್ಪಷ್ಟ ಕಲ್ಪನೆ ಇರಬೇಕು. ಅನಿರ್ದಿಷ್ಟತೆಯೇ ಅನೇಕ ಬಗೆಯ ಭಯಗಳಿಗೆ ಕಾರಣವಾಗುತ್ತದೆ. ನಾವು ಒಂದು ಅಪರಿಚಿತ ಪ್ರದೇಶದಲ್ಲಿದ್ದಾಗ, ಎಲ್ಲಿದ್ದೇನೆ, ಎಲ್ಲಿಗೆ ಹೋಗಬೇಕು ಎಂಬುದು ತಿಳಿಯದಿದ್ದಾಗ, ಭಯ ಆತಂಕಗಳು ಉಂಟಾಗುವುದು ಸ್ವಾಭಾವಿಕ. ಇಂದಿನ ದಿನಗಳಲ್ಲಿ, ವ್ಯಕ್ತಿಯ ಜೀವನವೂ ಇದೇ ಪರಿಸ್ಥಿತಿಯಲ್ಲಿದೆ. ಎಲ್ಲರೊಡನಿದ್ದೂ ನಾವು ಅಪರಿಚಿತರಂತಿದ್ದೇವೆ. ಈ ಒಂಟಿತನದ ಭಾವನೆಯೇ ಅನಾವಶ್ಯಕ ಭೀತಿಗಳಿಗೆ ಕಾರಣ. ಕಾಡಿನಲ್ಲಿ ಒಬ್ಬರೇ ಇದ್ದಾಗ, ಪ್ರತಿಯೊಂದು ಶಬ್ದವೂ ಭಯವನ್ನು ಉಂಟುಮಾಡುತ್ತದೆ. ಸೃಷ್ಟಿಕರ್ತ ಬ್ರಹ್ಮನಿಗೂ ಸೃಷ್ಟಿಗೆ ಮೊದಲು ತಾನು ಒಬ್ಬನೇ ಇದ್ದೇನೆಂಬ ಭಯ ಉಂಟಾಯಿತಂತೆ. ಒಂಟಿತನದಿಂದ ಉಂಟಾಗುವ ಅರಕ್ಷಣೆಯ ಭಾವವನ್ನು ಯಾವ ಆರಕ್ಷಕ ದಳದಿಂದಲೂ ನಿವಾರಿಸಲಾಗುವುದಿಲ್ಲ. ಅರಕ್ಷಣೆಯ ಭಾವವೇ (Feeling of insecurity) ಪ್ರತಿಯೊಂದು ಸನ್ನಿವೇಶದಲ್ಲಿಯೂ ಭಯಪಡುವ ಪರಿಸ್ಥಿತಿಯನ್ನು ಉಂಟುಮಾಡುತ್ತದೆ ಮತ್ತು ಈ ಭಯವೇ, ಹಿಂಸಾತ್ಮಕ ಕೃತ್ಯಗಳಿಗೆ ಕಾರಣವಾಗುತ್ತದೆ – ವಿಶೇಷವಾಗಿ ಇದು ಸಾಮೂಹಿಕವಾದಾಗ.

ಪ್ರತಿಯೊಬ್ಬ ವ್ಯಕ್ತಿಯೂ ಒಂದು ನಿರ್ದಿಷ್ಟ ಆದರ್ಶವನ್ನು ಇಟ್ಟುಕೊಂಡು, ಆ ಆದರ್ಶಕ್ಕೆ ಅನುಗುಣವಾಗಿ ತನ್ನ ಜೀವನವನ್ನು ರೂಪಿಸಿಕೊಳ್ಳಲು ಪ್ರಯತ್ನಿಸಿದಾಗ ಎಷ್ಟೋ ಅನಾವಶ್ಯಕ ಭೀತಿಗಳಿಂದ ಪಾರಾಗಬಹುದು. ಬೆಂಕಿ, ಹಿಂಸ್ರ ಪಶುಗಳು ಮುಂತಾದವುಗಳಿಗೆ ಸಂಬಂಧಿಸಿದ ಭಯ ಸ್ವಾಭಾವಿಕವಾದುದು ಮತ್ತು ಆವಶ್ಯಕವೂ ಕೂಡ. ಅವುಗಳ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳುವ ಆವಶ್ಯಕತೆ ಇಲ್ಲ.

ನಾವು ನಮ್ಮ ವ್ಯಕ್ತಿತ್ವದ ಆಳದಲ್ಲಿ ನೆಲೆಗೊಳ್ಳಬೇಕು. ನಮ್ಮ ವೈಯಕ್ತಿಕ ಆದರ್ಶದಿಂದ ನಾವು ದೂರವಾದಾಗ ನಮ್ಮ ವ್ಯಕ್ತಿತ್ವದಿಂದಲೂ ದೂರವಾಗುತ್ತೇವೆ. ಮಗು ತಾಯಿಯ ಮಡಿಲಿನಿಂದ ದೂರವಾದಾಗ ಭಯಕ್ಕೆ ಕಾರಣಗಳಿರುತ್ತವೆ. ನಮ್ಮ ವ್ಯಕ್ತಿತ್ವದ ನೆರೆಹಿನಾಶ್ರಯದಲ್ಲಿ ನಾವು ಸುರಕ್ಷಿತವಾಗಿರಬೇಕು. ಅಲ್ಲಿ ಸುರಕ್ಷಿತವಾಗಿ ನೆಲೆಯೂರಿ, ಇತರರೊಡನೆ ನಮ್ಮ ಸಂಬಂಧವನ್ನು ವಿಸ್ತರಿಸಬೇಕು. ಆಗ ಭಯವೇ ಭಯದಿಂದ ಓಡಿಹೋಗುತ್ತದೆ.

"ನಾವು ಭಯ ಪಡಬೇಕಾದ ಏಕೈಕ ವಿಷಯವೇ ಭಯ."

ಬರಹ: ಸ್ವಾಮಿ ನಿತ್ಯಸ್ಥಾನಂದ